ಶ್ರೀ ವಿದ್ಯಾಧೀಶತೀರ್ಥರ ಕುರಿತಾದ ಕೃತಿಗಳು



ರಚನೆ

ಇಂದಿರೇಶ ದಾಸರು

(ಶ್ರೀ ಪಾಂಡುರಂಗಿ ಹುಚ್ಚಾಚಾರ್ಯರು)

ಸಂಗ್ರಹ : ಅರವಿಂದಲೋಚನ

Rarest Archiver

Rarest Archiver

ಶ್ರೀಮತ್ ಸುಧಾಬ್ಧುತಾಂಬೋಧಿ ವಿಕ್ರೀಡನ ವಿಚಕ್ಷಣಾನ್ ।
ವಾಕ್ಯಾರ್ಥ ಚಂದ್ರಿಕಾಕಾರಾನ್ ವಿದ್ಯಾಧೀಶ ಗುರೂನ್ ಭಜೇ ॥

Rarest Archiver

ಗುರುವರನೆ ನಿನ್ನ ಚರಣಗಳ ಸ್ಮರಿಸಿ ಬೇಡುವೆ
ಹರಿಪಾದದಲ್ಲಿ ಭಕುತಿಯ ಕೊಡು ಇಂದು ಪೊಗಳುವೆ ॥ಪ॥

ಮತಿಹೀನ ನಾನು ನಿನ್ನನು ಅತಿಶಯದಿ ನಂಬಿದೆ
ಗತಿದಾವದ್ಧೇಳು ಗುರುವರ ಸಂಗತಿಯ ಬೇಡುವೆ ॥೧॥

ನಿನ್ನವನೊ ನಾನು ಎನ್ನೊಳು ನೀ ಕರುಣ ಮಾಳ್ಪುದು
ಅನ್ಯಾಯವಲ್ಲೆ ಎನ್ನನು ನೀ ನಿಂದು ಬಿಡುವದು ॥೨॥

ಇಂದೆನ್ನ ನೋಡು ಕರುಣದಿ ನೀ ನಿಂದಿರೇಶನ
ತಂದೆನಗೆ ತೋರು ವಂದಿಪೆ ನಾ ನಿನಗೆ ಅನುದಿನ ॥೩॥

Rarest Archiver

ಗುರುಸಾರ ನಿನ್ನ ಸ್ಮರಿಸುವೆ ಎನಗ್ಗುರಿಯ ತೋರಿಸೊ
ಪರಮ ಪುರುಷನಂಘ್ರಿಗಳನು ಮನದಿ ನಿಲ್ಲಿಸೊ ॥ಪ॥

ಒಬ್ಬ ಮಗನುಯೆಂದು ನಿನ್ನ ತಂದೆ ಯೋಚಿಸೆ
ಮಬ್ಬಿನಲ್ಲಿ ಬಂದ ಹರಿಯು ತನ್ನ ಚಿಂತಿಸೆ ॥೧॥

ನಿನ್ನೊಳೊಬ್ಬ ಜನಿಸುತಿಹನು ಘನ್ನ ಮಹಿಮನು
ಇನ್ನು ಮನದಿ ಚಿಂತೆ ಯಾಕೊ ಎನ್ನ ಭಜಿಪನು ॥೨॥

ಬಾಲ್ಯದಲ್ಲೆ ಭಾಳು ಭಕುತಿ ಮಾಡಿ ಎನ್ನೊಳು
ಲೋಲ ಸಾರ್ವಭೌಮನಾಗಿ ಮೆರೆವ ಜಗದೊಳು ॥೩॥

ಎನ್ನ ಮಹಿಮೆಯನ್ನು ಜಗದಿ ವರ್ಣಿಸುವನು
ಬಣ್ಣಗೆಡಿಸಿ ವಾದಿಗಳನು ನಿನ್ನ ಬಾಲನು ॥೪॥

ಇಂದಿರೇಶ ನೃಮೃಗ ರೂಪದಿಂದ ಸ್ವಪನದಿ
ನಿಂದು ಪೇಳೆ ನಂದಭಟ್ಟರಲ್ಲಿ ಜನಿಸಿದಿ ॥೫॥

Rarest Archiver

ದಯಮಾಡೊ ಗುರುವೆ ವಿದ್ಯಾಧೀಶ ॥
ದಯಮಾಡೊ ಗುರುವೆ ಸುದಯ ಪೂರ್ಣ ಹೃದಯಾನೆ
ದಮಿಸಿ ಅವಿದ್ಯಾ ಮಾಧವ ಪ್ರಿಯ ದಾಸನೆ ॥ಪ॥

ನಿನ್ನ ಹೊರತು ಎನಗನ್ಯ ಗತಿಯು ಇಲ್ಲಾ
ಧನ್ಯ ನಿನ್ನಯ ಕುಲವನ್ನೆ ಉದ್ಧರಿಸಯ್ಯಾ ॥೧॥

ಯಾತಕೆನ್ನಯ ಚಿಂತಿ ತಾತ ನಿನಗೆ ಇಲ್ಲಾ
ಪೋತಗೆಲ್ಲರೆ ಬೋಧ ಜ್ಯೋತಿ ಸಿಗುವದುಂಟೆ ॥೨॥

ಹಾಕಿದ ಭೂಜವ ಬೀಕಲ ಮಾಡೊರೆ
ತೋಕನಲ್ಲಿ ಕೃಪಾ ಯಾಕೆ ಮಾಡಲಿವಲ್ಲಿ ॥೩॥

ಇದು ಸಾರ್ಥಕವೆ ಅನವದ್ಯ ಕುಲದಿ ಪುಟ್ಟಿ
ವಿದ್ಯಾರಹಿತನಾಗಿ ಹದ್ದಿನಂದದಿ ನಾನು ॥೪॥

ನಿಂದಿಸುವರೊ ನಿನ್ನ ವಂದಿತ ಕುಲವನ್ನು
ಮುಂದೆ ಮಾರ್ಗವ ಪೇಳಿಂದಿರೇಶನ ಪ್ರಿಯ ॥೫॥

Rarest Archiver

ನೋಡುವದೆಮ್ಮನು ಗಾಢನೆ ಯತಿವರನೆ ॥
ಬೇಡಿದ್ದು ಕೊಡುವವನೆ ॥ಪ॥

ಕಾಶಿ ಯಾತ್ರಿಯ ಮಾಡುವ ಕಾಲದಲಿ ।
ಮಧ್ಯೆ ಮಾರ್ಗದಲಿ ॥
ಕ್ಲೇಶದಿಂದ ದುರ್ವಾದಿಯು ವರುತಿರಲಿ ॥
ವಾಸ ಮಾಡಿದನು ಸಭೆಯೊಳು ದೂರದಲಿ ।
ನಿನ್ನಲ್ಲಿ ನೋಡುತಲಿ ॥೧॥

(ಎರಡನೆ ನುಡಿ ಸಿಕ್ಕಿಲ್ಲ)

ಅಂದ ಮಾತು ಕಿವಿಯಿಂದಾಲೆ ಕೇಳುತಲಿ ।
ಮನದೊಳು ಭೀತಿಯಲಿ ॥
ಮುಂದ ಹೊರಟನು ವಸನವ ಜಗ್ಗುತಲಿ ॥
ಇಂದಿರೇಶನ ದಯದಿಂದ ಜಯಸುತಿರಲಿ ।
ಅಭಯವು ಎನ್ನಲ್ಲಿ ॥೩॥

Rarest Archives

ಪರಮ ಪುರುಷನ ಭಕ್ತಿರಸ್ತ್ವಿಹ
ಹರಿಯ ಸಂಸ್ಕೃತಿರಸ್ತ್ವಿಹ
ದುರುಳ ಭವದಿ ವಿರಕ್ತಿ ರಸ್ತ್ವಿಹ
ಗುರುವರ ಶೃ(ಸ್ಮೃ)ತಿರಸ್ತ್ವಿಹ ॥ಪ॥

ತಂದಿ ತಾಯಿಗಳನ್ನು ನಮಿಸುವೆ
ಬಂಧು ವರ್ಗವ ಸ್ಮರಿಸುವೆ
ನಂದಸೂನುನ ತೋರಲವರೆಂ
ತೆಂದು ಸಂಪ್ರಾರ್ಥಿಸುವೆ ॥೧॥

ಇವರಿಗ್ಹಿಂದಿನ ಸರ್ವ ಪಿತೃಗಳ
ಭವನದಲಿ ಸೇವಿಸುವೆನು
ಪವನ ಪಿತನನು ತೋರಲಿವರನು
ಸವನ ಯಾಚಿಸುತಿರುವೆನು ॥೨॥

ಇದ್ದು ವಿದ್ಯಾಧೀಶ ನಾಮದಿ
ಬ್ರಹ್ಮಮಗಳಿನ ತೀರದಿ
ಗೆದ್ದು ದುರ್ವಾದಿಗಳ ಪೊಳಿಯುವ
ಹೃದ್ಯನರ್ಚಿಪೆ ನಿಲಯದಿ ॥೩॥

ನಂದತೀರ್ಥರ ಸಮಯ ಟೀಕಾ
ದಿಂದಲರ್ಥವ ತಿಳಿಸುತ
ವಂದ್ಯ ಮಳಖೇಡದಲಿ ಇರುವ ಯ
ತೀಂದ್ರನರ್ಚಿಪೆ ಸಂತತ ॥೪॥

Rarest Archive

ಬರುವ ಜನರಿಗೆ ಕ್ಷಣವು ತಡಿಯದೆ
ವರವ ನೀಡುತಲಿರುವನ
ಗುರು ರಘೂತ್ತಮರನ್ನು ಸ್ಮರಿಸುವೆ
ಸಿರಿಪುರಿಯ ಮಹಾಮಹಿಮನ ॥೫॥

ಭರತ ಖಂಡದಲಿರುವ ಖಗಮೃಗ
ಶರಧಿ ನದಿ ಪೂರ್ವಂಗಳ
ಸರ್ವ ಕಾಲದಿ ಸ್ಮರಿಪೆ ನೀಡಲಿ
ಹರಿಯ ದರ್ಶನ ಸುಖಗಳ ॥೬॥

ಕೃಷ್ಣ ನಿಲಯದೊಳಿಷ್ಟು ಜನರಿಗೆ
ಕೊಟ್ಟು ಕರಜಲಮುಣಿಸುವೆ
ಇಟ್ಟು ದಾಕ್ಷಿಣ್ಯವನು ಹರಿಮುಖ
ಭೇಟಿ ನೀಡಿರಿ ಸುಖಿಸುವೆ ॥೭॥

ಹರಿಯುಪಾಸಿತ ತನ್ಮುಖಾಂಬುಜ
ದರ್ಶನಾನಂದಾತ್ಮರು
ಬರುತ ಕೃಷ್ಣಾಲಯದಿ ತೋರಿರಿ
ಸುರಭಿಪಾಲನ ಸರ್ವರು ॥೮॥

ವ್ಯಾಸ ನೀಡಿದ ಜ್ಞಾನಸುಧೆಯ ನಿ
ರ್ದೋಷ ಶುಭ ಚೇತನರಿಗೆ
ದಾಸನಾಭ್ಯರ್ಚಿಸು ಇಂದಿ
ರೇಶನನು ಕಂಡವರಿಗೆ ॥೯॥

Rarest Archiver

ಪಾಲಿಸೊ ಶ್ರೀಗುರುವರ ಪಾಲಿಸೊ ॥ಪ॥
ಪಾಲಿಸೊ ಗುರುವರ ಕಾಲ ಬಂದಿಹದಿಂಥಾ
ಕಾಲದೊಳಗೆ ನಮ್ಮ ಶೀಲಾನುಗುಣವಾಗಿ ॥ಅಪ॥

ಲಕ್ಷ ದಂಪತಿಗಳುಣಿಸಿದಿ ಗೃಹ
ಕುಕ್ಷಿಗವಾದಿ ಜಯಿಸಿದಿ ಮತೆ
ಭಿಕ್ಷಾನ್ನವನ್ನೆ ಭುಂಜಿಸಿದಿ ಆಹಾ
ಲಕ್ಷ್ಮೀನಾಥನು ನಿನ್ನ ಯಾಕೃತ ಸುಕೃತವ
ಲಕ್ಷಿಸುತದ್ಯಾಪಿ ಪಕ್ಷ ಪಾಲಿಸುತೀಹ ॥೧॥

ವಾರಣಾಸಿಗೆ ನೀನು ಪೋದಿ ಮ್ಲೇಂಛ
ವಾರ ಭಯ ತಪ್ಪಿಸಿದಿ ದ್ವೈತ
ಸಾರವ ಪುರದಿ ತೋರಿಸಿದಿ ಆಹಾ
ಸೂರಿವರನೆ ಫಲ್ಗು ತೀರದೊಳಗೆ ಮಹಾ
ಪಾರ ಮಹಿಮೆಗಳ ತೋರಿದಿ ಜನರಿಗೆ ॥೨॥

ಸೌಧ ವ್ಯಾಖ್ಯಾನ ರಚಿಸಿದಿ ಭಾತೃ
ಸೋದರ ಜನನ ಸಾಧಿಸಿದಿ ನಿಂದಿ
ಸೀದ ಜನರನ ಪಾಲಿಸೀದಿ ಆಹಾ
ಸಾಧು ಮತಿಯ ಗುರು ಬಾಧಿಸುತಿರೆ ಪ್ರತ್ಯ
ಕ್ಷಾದಿ ಬಾಲಗೆ ಮಹಾಗಾಧ ಬೋಧವನಿತ್ತಿ ॥೩॥

Rarest Archiver

ಪೃಥ್ವಿ ಪ್ರದಕ್ಷಿಣಕ್ಹೋದಿ ಗೋದಾ
ಮರ್ತ್ಯಸಿಂಹನ ವರಣಿಸಿದಿ ಕ್ಷಾರ
ತೀರ್ಥೋದದ ಮಧುರ ರಚಿಸಿದಿ ಆಹಾ
ಪಕ್ಷಿವಹನ ಗೃಹ ಕುಕ್ಷಿಯೊಳಗೆ ಮೃತಿ
ಶಿಕ್ಷಿಸಿ ಜನರಿಗೆ ಮೋಕ್ಷ ಸಾಧಿಸಿದಿಯೊ ॥೪॥

ಇಂದಿಗೂ ರಾಣಿಪುರದಲಿ ಶುಭ
ಮಂದಿರ ರಚಿಸಿ ಸನ್ನಿಧಿಲಿ ಸದಾ
ಬಂದ ಜನಗಳ ಲಕ್ಷಿಯಲಿ ಆಹಾ
ಇಂದಿರೇಶನ ದಯಾದಿಂದ ನಿಜಾತ್ಮವ
ಸುಂದರ ಸಂಪದಾನಂದ ಭೋಗಿಸುವಿಯೊ ॥೫॥

Rarest Archiver

ವಿದ್ಯಾಧೀಶರೆಂಬೊ ಸದ್ಗುರುಗಳ ಪಾದ ಶ್ರದ್ಧೆಯಿಂದಲಿ ಭಜಿಸಿ
ಮಧ್ವ ಮತಾಂಬುಧಿ ವೃದ್ಧಿಚಂದ್ರಮನಿವ
ಬುದ್ಧ್ಯಾದಿಗಳನ್ನಿತ್ತುದ್ಧಾರ ಮಾಡುವ ನಿಮ್ಮ ॥ಪ॥

ನಾರಸಿಂಹನ ದಿವ್ಯ ಚಾರುಚರಣ ಯುಗ
ವಾರಿಜ ಸೇವಿಸೆ ಪೂರ್ವದಲ್ಲಿ
ಭೂರಿಮತಿಯ ಶಾಸ್ತ್ರ ಸಾರಪೇಳುತ ಶಿಷ್ಯ
ವಾರ ಪಾಲಿಸುತಿಹ ನಾರಸಿಂಹಾಚಾರು ॥೧॥

ಶ್ರೀವೇದವ್ಯಾಸರು ನಿಜ ಬೋಧ ಮಹಿಮೆ ಕೇಳಿ
ಆದರದಲಿ ತಮ್ಮ ಸಾದಿಗಳ
ಚೋದಿಸತಿರಲಾಗ ಸಾಧಿಸಿ ಆಶ್ರಮ
ಬೋಧಿಸಿದನು ಪ್ರಣವಾದಿ ಮಂತ್ರಗಳನು ॥೨॥

ವಿದ್ಯಾಧೀಶರೆಂಬೊ ಚಿದ್ಗುಣ ತನುವಾಗಿ
ಶುದ್ಧ ನಾಮವನಿತ್ತು ಶ್ರದ್ಧೆಯಲಿ
ಗೆದ್ದು ವಾದಿಗಳ ಪ್ರಸಿದ್ಧಿಯ ಪಡೆಯೆಂದು
ಬುದ್ಧಿಪೂರ್ವಕವಾಗಿ ಸಿದ್ಧ ತಾ ನುಡಿದನು ॥೩॥

ಗುರುಗಳು ಕೊಟ್ಟಂಥಾ ಪರಮಾಶ್ರಮ ಪೊಂದಿ
ಹರಿಗುರುಗಳ ಪಾದಸ್ಮರಿಸೂತಲಿ
ತಿರುಗಿ ದೇಶಗಳೆಲ್ಲಾ ದುರವಾದಿಗಳ ಹಿಂಡು
ಕರಿಗಳ ಹರಿಯಂತೆ ಪರಿಭವಿಸುವಿಯೆಂದು ॥೪॥

ಇಂದು ಈ ಆಶ್ರಮ ಬಂದಿತು ಹರಿಕೃಪೆ
ಯಿಂದಾಲೆ ಬೇರಿಲ್ಲವೆಂದೆನುತ
ಇಂದಿರೇಶನ ಪಾದ ವಂದಿಸುತನುದಿನಾ
ನಂದ ಬಡುವಿ ಭವಬಂಧ ಹೋಗಾಡುವಿ ॥೫॥

Rarest Archiver

ವಿದ್ಯಾಧೀಶರ ಮಹಿಮೆ ಪೇಳುವೆ ನಾನು
ಶೃದ್ಧೆಯಿಂದಲಿ ಕೇಳಿರಿ ||ಪ||

ಇಕ್ಕೆರಿ ಗ್ರಾಮದಲ್ಲಿ ಇರುವೊನೊಬ್ಬ
ದಕ್ಕಾನು ಸರ್ವರಲ್ಲಿ
ಸಿಕ್ಕ ಪಂಡಿತರನ್ನು ಮುಕ್ಕುವ ಸಭೆಯಲ್ಲಿ
ಲೆಕ್ಕವಿಲ್ಲದೆ ಜಯ ಪಂಕಿಯ ಪಡೆದಿಹ ||೧||

ಅಲ್ಲೊಬ್ಬ ಭೂಪಾಲನು ಸ್ವಾಮಿಯ
ಪಾದದಲ್ಲಿ ಬಿದ್ದೇಳಿದನು
ಎಲ್ಲರಾಜ್ಯವು ನಿಮ್ಮ ದಿಲ್ಲೆ ಕೆಲವು ದಿನ
ನಿಲ್ಲಿಸುವದು ಸೀತಾ ವಲ್ಲಭನೆಂದಾನು ||೨||

ಯತಿವರನನುದಿನದಿ ಸ್ವಶಿಷ್ಯರ
ತತಿಯಿಂದಲಾಪುರದಿ
ಪ್ರತತ ಮಹಿಮ ಸೀತಾ ಪತಿಯ ಪೂಜಿಸಿ ಮಧ್ವ
ಮತವ ಪೇಳುತ ನಿಂತಾ ನತಿಶಯ ತೋಷದಿ ||೩||

ರಂಗೋಜಿಭಟ್ಟನೆಂಬೊ ವಾದಿಯ ಯತಿ
ಪುಂಗವರನು ಕೇಳಿದಾ
ಕಂಗಳಿಂದಲೆ ನೋಡಿ ನಮಗೂ ನಿಮಗೂ ಶಾಸ್ತ್ರ
ಸಂಗರ ನಡೆಯಲನಂಗ ಜಯಿಯೆ ಯೆಂದಾ ||೪||

Rarest Archiver

ಉಚ್ಚಿಷ್ಟ ಗಣಪತಿಯ ರಂಗೋಜಿಯು
ಮೆಚ್ಚಿಸಿ ವರ ಪಡೆದ
ಮತ್ಸರದಲಿ ಸರ್ವ ತುಚ್ಛೆಯ ಮಾಡುತ
ಹುಚ್ಚಶುನಕನಂತೆ ಸ್ವೇಚ್ಛೆಯಿಂದಿರುತಿಹ ॥೫॥

ಕೆಟ್ಟ ಶಾಸ್ತ್ರಗಳೆಂಬುವ ರಂಗೋಜಿಯು
ಬಿಟ್ಟ ಶಸ್ತ್ರಾಸ್ತ್ರಗಳ
ಕುಟ್ಟಿಹಾಕಿದ ಸುರ ಜೇಷ್ಠನಸ್ತ್ರದಿ ಹರಿ
ತುಷ್ಟಿಯಾಗಲಿಯೆಂದು ಭ್ರಷ್ಟನ ಗೆಲಿದಾನು ॥೬॥

ಸಮ್ಮುಖ ಸಂಗರದಿ ಉತ್ತರ ನಾನು
ಒಮ್ಮೆಲೆ ಕೊಡಲಾರೆನು
ಹಮ್ಮಿಪತ್ರದಿ ತಮ್ಮಲ್ಲೆ ಕಳಿಸುವೆನು
ನಮ್ಮ ವಿಷಯಗಳಾಥಮ್ಮ ನಂದನು ಹೀಗೆ ॥೭॥

ಅಂದ ಮಾತನು ಕೇಳುತ ಮನದಿ ಯತಿ
ಮಂದಹಸವ ಮಾಡುತ
ಅಂದಂತಾಗಲಿಯೆಂದು ಒಂದೆರಡು ಮಾಸದಿ
ತಂದ ಪತ್ರಿಕವೆಲ್ಲ ಛಿಂದಿಸಿ ಹಾಕಿದ ॥೮॥

ಭೀತನಾದನು ವಾದಿಯು ಸ್ವಾಮಿಗಳಲ್ಲಿ
ಮಾತನಾಡುವ ಹಾದಿಯು
ಯಾತರದಿಲ್ಲೆಂದು ಈ ತನುವಡಗಿಸಿ ಆ
ತನ್ನ ಪುರ ಬಿಟ್ಟು ರಾತರಿ ಓಡಿದ ॥೯॥

ಮುಂಗಿಯೆಂಬುವ ಗ್ರಾಮದಿ ತನ್ನಯ ಮಾನ
ಭಂಗವಾಗುವ ಭಯದಿ
ಲಿಂಗ ಬಿಟ್ಟವನನ್ನ ಮಂಗನ ಮರಿಯಂತೆ
ಹಂಗಿಸಿ ತರಲು ರಾಜಂಗಳ ದೂತರು ॥೧೦॥

Rarest Archiver

ಪಾಶ ಬಿಗಿದು ತಂದರು ಗ್ರಾಮಾಂತರ
ವೇಷಧಾರಿಯು ಎಂದರು
ದಾಸನು ನಾನು ಯತೀಶನೆ ಬಿಡುಯೆಂದ
ವಾಸವಾರಿಯ ಸ್ವಾಮಿ ದಾಸನೆನಿಸಿಬಿಟ್ಟ ॥೧೧॥

ನಾರಸಿಂಹನ ದಯದಿ ಎಷ್ಟೋ ಇಂಥಾ
ಚೋರರಗಳ ವಾದದಿ
ಈ ರಸಮಯ ಯುಕ್ತಿ ವಾರದಿಂದಲೆ ಗೆದ್ದು
ಮಾರನಪಿತ ಯದುವೀರಗರ್ಪಿಸಿದಾನು ॥೧೨॥

ಭಕ್ತಿಯಿಂದಲಿ ಇವರ ಈ ತುತಿಗಳ
ನಿತ್ಯ ಪಠಿಸುವವರ
ಭೃತ್ಯಕಾಮಿತ ದಾತಾ ಮರ್ತ್ಯ ಮೃಗೇಂದ್ರಾನು
ಚಿತ್ತದಿ ಸಂತತ ನರ್ತನ ಮಾಡುವ ॥೧೩॥

ಸುಂದರ ಸ್ವಾಮಿಗಳ ಮನದಿ ತಂದು
ಒಂದೊಂದೆ ಮಹಿಮೆಗಳ
ಛಂದದಿ ಭಜಿಸುತ ಬಂದ ಭಕುತರಗಳಾ
ನಂದದಿ ಪಾಲಿಪ ಮಂದರಧರಹರ ॥೧೪॥

ನಂದಗೋಪನ ಬಾಲಾನು ಎನ್ನಯ ಜಿವ್ಹೆ
ಮಂದಿರದೊಳು ನಿಂತಾನು
ಒಂದೆ ರಾತ್ರಿಲಿ ಗುರುವೃಂದ ತುತಿ ಮಾಡಿ
ಸಿಂದಿರೇಶನ ಭಕ್ತಾನಂದವ ನೀಡಿದ ॥೧೫॥

Rarest Archive

Rarest Archiver

Rarest Archiver